ಇ) ಹಿರೇಕೆರೂರು ತಾಲ್ಲೂಕಿನ ಚಿಕ್ಕೇರೂರು ಗ್ರಾಮದಲ್ಲಿ 33 : 11ಕೆವಿ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ ಸದ್ಯಕ್ಕೆ ಯಾವುದೇ ಪ್ರಸ್ತಾವನೆಯು ಮಂಡಳಿಯ ಮುಂದೆ ಇರುವುದಿಲ್ಲ. ಸದರೀ ಗ್ರಾಮದಲ್ಲಿ ಒಂದು 33 : 11 ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವ ಅವಶ್ಯಕತೆ ಬಗ್ಗೆ ವಿವರವಾಗಿ ಪರಿಶೀಲಿಸಿ, ಅವಶ್ಯಕತೆ ಇದ್ದಲ್ಲಿ ಈ ಬಗ್ಗೆ ಕ್ರಮವನ್ನು ಕೈಗೊಳ್ಳಲಾಗುವುದು.

ನಗರ ಮತ್ತು ಗ್ರಾಮೀಣಾ ಪ್ರದೇಶಗಳಲ್ಲಿ ಆಹಾರ ಮತ್ತು ಸೀಮೆ ಎಣ್ಣೆ ವಿತರಣೆ

1221 - ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರದಲ್ಲಿರುವ ಹಸಿರು ಕಾರ್ಡುದಾರರಿಗೆ ಎಷ್ಟು ಪ್ರಮಾಣದ ಆಹಾರ ಮತ್ತು ಸೀಮೆ ಎಣ್ಣೆ ತಿಂಗಳಿಗೆ ವಿತರಣೆ ಆಗುತ್ತದೆ ಹಾಗೂ ಇವುಗಳ ದರಗಳೆಷ್ಟು?

ಆ) ಗ್ರಾಮೀಣ ಪ್ರದೇಶದಲ್ಲಿರುವ ಪ್ರತಿ ಹಸಿರು ಕಾರ್ಡುದಾರರಿಗೆ ಎಷ್ಟು ಪ್ರಮಾಣದ ಆಹಾರ ಮತ್ತು ಸೀಮೆಎಣ್ಣೆ ಪ್ರತಿ ತಿಂಗಳು ವಿತರಣೆ ಆಗುತ್ತದೆ ಹಾಗೂ ಇವುಗಳ ದರಗಳೆಷ್ಟು?

ಇ) ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವವರಿಗೆ ತ್ರಿವರ್ಣ ಪಡಿತರ ಚೀಟಿ ಮೂಲಕ ಪ್ರತಿ ಕಾರ್ಡಿಗೆ ಒಂದು ತಿಂಗಳಿಗೆ ಎಷ್ಟು ಪ್ರಮಾಣದ ಆಹಾರ ಮತ್ತು ಸೀಮೆಎಣ್ಣೆ ಸರಬರಾಜು ಮಾಡಲಾಗುತ್ತಿದೆ ಮತ್ತು ಅವುಗಳ ದರಗಳು ಎಷ್ಟು? (ವಿವರವಾದ ಮಾಹಿತಿ ನೀಡುವುದು)

ಶ್ರೀ ಜಿ. ಬಸವಣ್ಣೆಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ನಗರದಲ್ಲಿರುವ ಹಸಿರು ಕಾರ್ಡುದಾರರು ಈ ಕೆಳಕಂಡ ಪ್ರಮಾಣದಲ್ಲಿ ಆಹಾರ ಮತ್ತು ಸೀಮೆಎಣ್ಣೆಯನ್ನು ಪ್ರತಿ ತಿಂಗಳು ಪಡೆಯುತ್ತಿದ್ದಾರೆ.

ಕ್ರ.ಸಂ.	ಪದಾರ್ಥ	ಪ್ರಮಾಣ	ದರ
1.	ಅಕ್ಕಿ	8 ಕೆ.ಜಿ.	ಪ್ರತಿ ಕೆ.ಜಿ.ಗೆ ರೂ.3.50
2.	ಗೋಧಿ	2 ಕೆ.ಜಿ.	ಪ್ರತಿ ಕೆ.ಜಿ.ಗೆ ರೂ.2.50
3.	ಸಕ್ಕರೆ	3 ಕೆ.ಜಿ.	ಪ್ರತಿ ಕೆ.ಜಿ.ಗೆ ರೂ.11.40
4.	ಸೀಮೆಎಣ್ಣೆ	6 ರಿಂದ 10 ಲೀಟರ್	ಪ್ರತಿ ಲೀಟರ್‌ಗೆ ರೂ.3.00 ರಿಂದ 3.75
5.	ಹೆಚ್ಚುವರಿ	2 ಕೆ.ಜಿ. ಅಕ್ಕಿ	ರೂ.7.60ರ ದರದಲ್ಲಿ

ಆ) ಗ್ರಾಮೀಣ ಪ್ರದೇಶದಲ್ಲಿರುವ ಹಸಿರು ಕಾರ್ಡುದಾರರು ಈ ಕೆಳಕಂಡ ಪ್ರಮಾಣದಲ್ಲಿ ಆಹಾರ ಮತ್ತು ಸೀಮೆ ಎಣ್ಣೆಯನ್ನು ಪ್ರತಿ ತಿಂಗಳು ಪಡೆಯುತ್ತಿದ್ದಾರೆ.

ಕ್ರ.ಸಂ.	ಪದಾರ್ಥ	ಪ್ರಮಾಣ	ದರ
1.	ಅಕ್ಕಿ	8 ಕೆ.ಜಿ	ಪ್ರತಿ ಕೆ.ಜಿ.ಗೆ ರೂ.3.50
2.	ಗೋಧಿ	2 ಕೆ.ಜಿ	ಪ್ರತಿ ಕೆ.ಜಿ.ಗೆ ರೂ.2.50
3.	ಸಕ್ಕರೆ	1 1/4ಕೆ.ಜಿ.	ಪ್ರತಿ ಕೆ.ಜಿ.ಗೆ ರೂ.11.40
4.	ಸೀಮೆಎಣ್ಣೆ	4 ರಿಂದ 6 ಲೀಟರ್	ಪ್ರತಿ ಲೀಟರ್‌ಗೆ ರೂ.3.00 ರಿಂದ 3.75
5.	ಹೆಚ್ಚುವರಿ	2 ಕೆ.ಜಿ. ಅಕ್ಕಿ	ರೂ. 7.60 ದರದಲ್ಲಿ

ಇ) ತ್ರಿವರ್ಣ ಪಡಿತರ ಚೀಟಿಗಳು ಪ್ರಸ್ತುತ ಚಾಲ್ತಿಯಲ್ಲಿ ಇರುವುದಿಲ್ಲ. 1995ನೇ ಸಾಲಿನಲ್ಲಿ ಈ ತ್ರಿವರ್ಣ ಕಾರ್ಡುಗಳಿಂದ ಮಹಾತ್ಮ ಗಾಂಧೀಜಿಯವರ ಭಾವಚಿತ್ರವಿರುವ ಹಸಿರು ಕಾರ್ಡುಗಳಾಗಿ ಬದಲಾಯಿಸಲಾಗಿದೆ. ಗ್ರಾಮಾಂತರ ಮತ್ತು ಪಟ್ಟಣ ಪ್ರದೇಶದ ಹಸಿರು ಕಾರ್ಡುದಾರರಿಗೆ ಆಹಾರದಾನ್ಯಗಳ ವಿತರಣಾ ಪ್ರಮಾಣ ಮತ್ತು ದರಗಳು ಒಂದೇ ರೀತಿ ಆಗಿರುತ್ತವೆ.

ವಿರಾಜಪೇಟೆ ತಾಲ್ಲೂಕಿನಲ್ಲಿ ಕಿರು ವಿದ್ಯುತ್ ಉತ್ಪಾದನಾ ಯೋಜನೆ.

1223 - ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಅಸಂಪ್ರಾದಾಯಕ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿರಾಜಪೇಟೆ ತಾಲ್ಲೂಕಿನಲ್ಲಿ ಕಿರು ವಿದ್ಯುತ್ ಉತ್ಪಾದನಾ ಯೋಜನೆಯ ಸಲುವಾಗಿ ಯಾವ ಯಾವ ಸ್ಥಳಗಳನ್ನು ಆಯ್ಕೆ ಮಾಡಲಾಗಿದೆ ಮತ್ತು ಆಯ್ಕೆ ಮಾಡಿದ ಸ್ಥಳಗಳಿಗೆ ಪರಿಸರ ಇಲಾಖೆ ಅನುಮತಿ ನೀಡಿದೆಯೇ?

ಆ) ಕಿರು ವಿದ್ಯುತ್ ಉತ್ಪಾದನೆಯ ಯೋಜನೆಯನ್ನು ಸರ್ಕಾರ ಕೈಗೆತ್ತಿಕೊಳ್ಳಲಿದೆಯೇ ಅಥವಾ ಖಾಸಗಿಯವರಿಗೆ ವಹಿಸಿಕೊಡಲಿದೆಯೇ ಹಾಗಿದ್ದಲ್ಲಿ, ಖಾಸಗಿ ಒಡೆತನದವರು ಯಾರು ಮತ್ತು ಎಷ್ಟು ಪ್ರಮಾಣದ ಹಣಹೂಡಿಕೆಯನ್ನು ಈ ಯೋಜನೆಗೆ ಬಳಸಲಿದ್ದಾರೆ? (ವಿವರ ನೀಡುವುದು)

ಶ್ರೀ ಶರಣಬಸಪ್ಪ ದರ್ಶನಾಪುರ್ (ರಾಜ್ಯ ಅಸಂಪ್ರದಾಯಕ ಇಂಧನ ಸಚಿವರು) :

ಅ) ವಿರಾಜಪೇಟೆ ತಾಲ್ಲೂಕಿನಲ್ಲಿ ಈ ಕೆಳಕಂಡ ಕಿರು ಜಲ ವಿದ್ಯುತ್ ಉತ್ಪಾದನಾ ಯೋಜನೆಗಳನ್ನು ಸರ್ಕಾರ ಆಯ್ಕೆ ಮಾಡಿರುತ್ತದೆ.

1. ಕೀರ್ತಿಹೊಳೆ
2. ಇರಪ್ಪು ಜಲಪಾತ
3. ಬಲಯಂತ್ರ ಹೊಳೆ